# <u>ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ., ಸಂಚಾರಿ ನ್ಯಾಯಾಲಯ.</u>

## <u>ರಟ್ಟೀಹಳ್ಳಿ.</u>

## <u>ಸಿ.ಸಿ.ನಂಬರ್ಃ 741/2022</u>

ಸಿಡಬ್ಲ್ಯೂಃ 4

ಪಿಡಬ್ಲ್ಯೂಃ 3

| | | |
|---|---|---|
| ಸಾಕ್ಷಿಯ ಹೆಸರು | : | ರಾಮಪ್ಪ ಬಾರ್ಕಿ |
| ತಂದೆಯ ಹೆಸರು | : | ನಿಂಗಪ್ಪ |
| ವಯಸ್ಸು | : | 50 ವರ್ಷ |
| ಉದ್ಯೋಗ | : | ಹೆಚ್.ಸಿ. ಹಾನಗಲ್ ಪಿ.ಎಸ್. |
| ವಾಸಸ್ಥಳ | : | ಹಾನಗಲ್ |

ಇಂದು ದಿನಾಂಕಃ 09.07.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

<u>**ಮುಖ್ಯ ವಿಚಾರಣೆಃ**</u> ಮಾನ್ಯ ಎಪಿಪಿಯವರಿಂದಃ

ನಾನು 2015 ರಿಂದ 2020 ರವರಗೆ ರಟ್ಟಿಹಳ್ಳಿ ಪೋಲಿಸ್ ಠಾಣೆಯಲ್ಲಿ ಹಚ್.ಸಿ., ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

1. ದಿನಾಂಕಃ 03.05.2019 ರಂದು ಸಂಜೆ 4 ಗಂಟೆಗೆ ನಾನು ಠಾಣೆಯಲ್ಲಿದ್ದಾಗ ಚಾಸಾ-1 ರವರು ನನಗೆ ಮತ್ತು ಚಾಸಾ-5 ರಿಂದ 7 ರವರನ್ನು ಕರೆದು ರಟ್ಟೀಹಳ್ಳಿ ಪಟ್ಟಣದ ಒಕ್ಕಲಗೇರಿ ಓಣಿ ಕ್ರಾಸ್ ಅರಳಿಮರದ ಹತ್ತಿರ ಒಬ್ಬ ವ್ಯಕ್ತಿ ರೂ. 1/- ರೂ. 80/- ಹಣ ಕೊಡುವುದಾಗಿ ಹೇಳಿ ಓಸಿ ಜೂಜಾಟ ಆಡುತ್ತಿರುವ ಬಗ್ಗೆ ಖಚಿತ ಬಾತ್ಮಿ ಬಂದಿರುತ್ತದೆ ಎಂದು ಹೇಳಿ, ಚಾಸಾ-1 ರವರು ಸಿಪಿಯ ಮತ್ತು ಡಿ.ಎಸ್.ಪಿ.ರವರಿಗೆ ಸದರಿ ಬಾತ್ಮಿ ವಿಷಯ ತಿಳಿಸಿ, ಮಾರ್ಗದರ್ಶನ ಪಡೆದು, ಸುಮಾರು 4-15 ಗಂಟೆಗೆ ನನ್ನನ್ನು ಹಾಗೂ ಚಾಸಾ-5 ರಿಂದ 7 ರವರನ್ನು ಒಂದು ಖಾಸಗಿ ಓಮಿನಿ ವಾಹನದಲ್ಲಿ ಕರೆದುಕೊಂಡು ರಟ್ಟೀಹಳ್ಳಿಯ ಚಿಕ್ಕಯಡಚಿ ಕ್ರಾಸ್ ಹತ್ತಿರ ಬಂದು, ವಾಹನ ನಿಲ್ಲಿಸಿ, ಅಲ್ಲಿ ಇಬ್ಬರು ಪಂಚರನ್ನು ಹಾಜರುಪಡಿಸಿಕೊಂಡು ಬಾತ್ಮಿ ವಿಷಯ ತಿಳಿಸಿ, ಒಪ್ಪಿಕೊಂಡಿದ್ದು ಅವರನ್ನು ನಮ್ಮ ಸಂಗಡ ಕರೆದುಕೊಂಡು, ನಂತರ ಚಾಸಾ-1 ರವರು ಹಾಗೂ ನಾವೆಲ್ಲರೂ, ಪಂಚರು ನಡೆದುಕೊಂಡು ಹೋಗಿ ಒಂದು ಮನೆಯ ಗೋಡೆಗೆ ಮರೆಯಾಗಿ ನಿಂತು ವಾಚ್ ಮಾಡಿ, ಅರಳಿಮರದ ಹತ್ತಿರ ನೋಡಲಾಗಿ ಅಲ್ಲಿ ಒಬ್ಬ ವ್ಯಕ್ತಿ ಸಾರ್ವಜನಿಕರನ್ನು ಕರೆದು ರೂ. 1/- ರೂ. 80/- ಹಣ ಕೊಡುವುದಾಗಿ ಹೇಳಿ ಹಣ ಪಡೆದು ಓಸಿ ಚೀಟಿ ಬರೆದುಕೊಳ್ಳುತ್ತಿದ್ದನು.

2. ಸದರಿ ಬಾತ್ಮಿ ವಿಷಯ ಖಾತ್ರಿಪಡಿಸಿಕೊಂಡು, ಚಾಸಾ-1 ರವರು ಓಸಿ ಬರೆಯುತ್ತಿದ್ದ ವ್ಯಕ್ತಿಯನ್ನು ಹಿಡಿದರು. ನಾವು ಓಸಿ ಚಿಟಿ ಬರೆಸುತ್ತಿದ್ದ ಜನರನ್ನು ಹಿಡಿಯಲು ಪ್ರಯತ್ನಿಸಿದ್ದು ಅವರು ಓಡಿ ಹೋಗಿರುತ್ತಾರೆ. ಆಗ 4-30 ಗಂಟೆ ಆಗಿತ್ತು. ನಂತರ ಚಾಸಾ-1 ರವರು ಆರೋಪಿಯ ಹೆಸರು ಕೇಳಲಾಗಿ ಶಿವರಾಜ ಮುರಡಕ್ಕನವರು, ಸಾಃ ರಟ್ಟೀಹಳ್ಳಿ ಎಂದು ಹೇಳಿರುತ್ತಾನೆ. ನಂತರ ಪಂಚರ ಸಮಕ್ಷಮ ಆರೋಪಿಯ ಅಂಗ ಜಪ್ತಿ ಮಾಡಲಾಗಿ, ಸದರಿ ಆರೋಪಿಯ ಹತ್ತಿರ ರೂ. 8,930/-, ಒಂದು ಬಾಲ್ ಪೆನ್, 21 ಓಸಿ ಅಂಕಿ ಸಂಖ್ಯೆ ಬರೆದ ಓಸಿ ಚೀಟಿಗಳು ಹಾಗೂ 10 ಕತ್ತರಿಸಿದ ಖಾಲಿ ಬಿಳಿ ಚೀಟಿಗಳು, ಒಂದು ಎಮ್.ಐ. ಕಂಪನಿಯ ಮೊಬೈಲ್ ಇದ್ದು, ಅವುಗಳನ್ನು ಚಾಸಾ-1 ರವರು ಪಂಚರ ಸಮಕ್ಷಮ ಜಪ್ತುಪಡಿಸಿಕೊಂಡಿರುತ್ತಾರೆ. ನಂತರ ಆರೋಪಿಗೆ ಬರೆದಂತಹ ಓಸಿ ಚಿಟಿಗಳನ್ನು ಯಾರಿಗೆ ಕೊಡುತ್ತೀಯಾ ಎಂದು ಕೇಳಲಾಗಿ, 2 ನೇ ಆರೋಪಿಗೆ ಕೊಡುವುದುದಾಗಿ ಹೇಳಿರುತ್ತಾರೆ. ಸ್ಥಳದಲ್ಲಿ 4-30 ರಿಂದ 5-30 ವರೆಗೆ ಪಂಚನಾಮೆ ಮಾಡಿ, ಚಾಸಾ-5 ರವರು ಲ್ಯಾಪ್‌ಟಾಪ್‌ನಲ್ಲಿ ಪಂಚನಾಮೆಯನ್ನು ಟೈಪ್ ಮಾಡಿರುತ್ತಾರೆ.

3. ನಂತರ ಆರೋಪಿ 1 ಹಾಗೂ ಜಪ್ತುಪಡಿಸಿಕೊಂಡು ಮುದ್ದೆಮಾಲುಗಳೊಂದಿಗೆ ಠಾಣೆಗೆ ಬಂದು ಚಾಸಾ-1 ರವರು ಸರ್ಕಾರಿ ತರ್ಫೆ ಫಿರ್ಯಾದಿ ನೀಡಿರುತ್ತಾರೆ. ನಾನು ಈ ಬಗ್ಗೆ ಚಾಸಾ-13 ರವರಿಗೆ ಹೇಳಿಕೆ ನೀಡಿರುತ್ತೇನೆ. ಸಾಕ್ಷಿಯು ಪಂಚನಾಮೆಯಾದ ನಿಪಿ-2 ರ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಸಹಿಯನ್ನು ನಿಪಿ-2(ಸಿ) ಎಂದು ಗುರುತಿಸಲಾಯಿತು. ಸದರಿ ಪಂಚನಾಮೆಗೆ ನಮ್ಮ ಸಿಬ್ಬಂದಿಗಳೂ ಸಹ ಸಹಿ ಮಾಡಿರುತ್ತಾರೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಮುಮಾ-1 ರಿಂದ 4 ಗಳನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ಮೊಬೈಲ್‌ನ್ನು ನೋಡಿದರೆ ಗುರುತಿಸುವುದಾಗಿ ನುಡಿಯುತ್ತಾರೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ 1 ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**<u>ಪಾಟೀ ಸವಾಲುಃ</u>** ಆರೋಪಿತರ ಪರ ಶ್ರೀ. ಎಮ್.ಬಿ.ಪಿ. ವಕೀಲರಿಂದಃ

1. ಠಾಣೆಗೆ ಯಾರಾದರೂ ಬಂದು ಘಟನೆಯ ಬಗ್ಗೆ ಫಿರ್ಯಾದಿ ನೀಡಿದ್ದರಾ ಎಂದರೆ ನನಗೆ ಗೊತ್ತಿಲ್ಲ. ಓಮಿನಿ ವಾಹನ ಠಾಣೆಯ ಮುಂದೆ ಇತ್ತು. ಸದರಿ ಓಮಿನಿ ವಾಹನದ ನಂಬರ, ಮಾಲೀಕರು ಹಾಗೂ ಚಾಲಕರು ನನಗೆ ಗೊತ್ತಿಲ್ಲ. ಸದರಿ ವಾಹನ ಠಾಣೆಗೆ ಏಕೆ ಬಂದಿತ್ತು ಎಂದು ನನಗೆ ಗೊತ್ತಿಲ್ಲ. ರಟ್ಟೀಹಳ್ಳಿ ಪೊಲೀಸ್ ಠಾಣೆಗೆ ಚಿಕ್ಕಯಡಚಿ ಕ್ರಾಸ್ ದಾಟಿಯೇ ಹೋಗಬೇಕು ಎಂದರೆ ಸರಿ. ಚಿಕ್ಕಯಡಚಿ ಕ್ರಾಸ್‌ನ ಪಶ್ಚಿಮ ದಿಕ್ಕಿನ ಕಡೆಗೆ ವಾಹನ ನಿಲ್ಲಿಸಿ, ಬಾತ್ಮಿ ಸ್ಥಳಕ್ಕೆ ಹೋಗಿರುತ್ತೇವೆ.

2. ಚಿಕ್ಕಯಡಚಿ ಕ್ರಾಸ್‌ನ ಪೂರ್ವಕ್ಕೆ ರಟ್ಟೀಹಳ್ಳಿ ಊರು, ಪಶ್ಚಿಮಕ್ಕೆಃ ಬಸ್ ನಿಲ್ದಾಣ ಎಂದರೆ ಸಾಕ್ಷಿಯು ಪೂರ್ವಕ್ಕೆಃ ರಾಣೇಬೆನ್ನೂರು ರಸ್ತೆ, ಪಶ್ಚಿಮಕ್ಕೆಃ ಮಾಸೂರ ರಸ್ತೆ, ಉತ್ತರಕ್ಕೆಃ ಪೊಲೀಸ್ ಠಾಣೆ ಮತ್ತು ದಕ್ಷಿಣಕ್ಕೆಃ ರಟ್ಟೀಹಳ್ಳಿ ಊರು ಎಂದು ನುಡಿಯುತ್ತಾರೆ. ಚಿಕ್ಕಯಡಚಿ ಕ್ರಾಸ್ ಉತ್ತರಕ್ಕೆ ರಾಣೇಬೆನ್ನೂರು ಮತ್ತು ದಕ್ಷಿಣಕ್ಕೆ ಮಾಸೂರು ರಸ್ತೆ ಎಂದರೆ ಸರಿಯಲ್ಲ. ನಾವು ಮರೆಮಾಚಿ ನಿಂತ ದಕ್ಷಿಣ ದಿಕ್ಕಿಗೆ 1 ನೇ ಆರೋಪಿಯು ಓಸಿ ಆಡುತ್ತಿದ್ದ. ಯಾವ ಮನೆಯ ಗೋಡೆಗೆ ಮರೆಮಾಚಿ ನಿಂತಿದ್ದೆವು ಎಂದು ನನಗೆ ಗೊತ್ತಿಲ್ಲ. ಚಿಕ್ಕಯಡಚಿ ಕ್ರಾಸ್‌ನಲ್ಲಿ ನಿಂತರೆ ಒಕ್ಕಲಿಗರ ಓಣಿ ಕ್ರಾಸ್ ಹಾಗೂ ಅರಳಿಮರ ಕಾಣಿಸುತ್ತದೆ ಎಂದರೆ ಸರಿ. ಚಿಕ್ಕಯಡಚಿ ಕ್ರಾಸ್‌ನಿಂದ ಅರಳಿಮರಕ್ಕೆ 150 ಮೀ. ಅಂತರ ಇರುತ್ತದೆ. ಚಿಕ್ಕಯಡಚಿ ಕ್ರಾಸ್‌ನಲ್ಲಿ ನಿಂತು ನೋಡಿದರೆ ಅರಳಿಮರದ ಹತ್ತಿರ ಯಾವುದೇ ವ್ಯಕ್ತಿ ನಿಂತರೆ ಕಾಣಿಸುತ್ತದೆ ಎಂದರೆ ಸಾಕ್ಷಿಯು ಅಷ್ಟೊಂದು ಸ್ಪಷ್ಟವಾಗಿ ಕಾಣಿಸುವುದಿಲ್ಲ ಎಂದು ನುಡಿಯುತ್ತಾರೆ.

3. ಓಸಿ ಚೀಟಿ ಬರೆಯುತ್ತಿದ್ದಿದ್ದು ನಿಮಗೆ ಹೇಗೆ ಖಾತ್ರಿ ಆಯಿತು ಎಂದರೆ ಸಾಕ್ಷಿಯು ಓಸಿ ಚಿಟಿ ನೋಡಿದರೆ ಗೊತ್ತಾಗುತ್ತದೆ ಎಂದು ನುಡಿಯುತ್ತಾರೆ. ಓಸಿ ಬರೆಸಿದ ಜನರು ಯಾರಾದರೂ ಮಾಹಿತಿ ನೀಡದರಾ ಎಂದರೆ ಸಾಕ್ಷಿಯು 1 ನೇ ಆರೋಪಿ ಕೂಗಿ ಹೇಳಿ, ಬರೆಯುತ್ತಿದ್ದನ್ನು ನೋಡಿರುತ್ತೇವೆ ಎಂದು ನುಡಿಯುತ್ತಾರೆ. ಆರೋಪಿ 1 ಯಾವ ಓಸಿ ಆಡ ಆಡುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ಸಾರ್ವಜನಿಕರು ಉತ್ತರ ದಿಕ್ಕಿನ ಕಡೆಗೆ ಓಡಿ ಹೋದರು. ಎಷ್ಟು ಜನ ಸಾರ್ವಜನಿಕರು ಇದ್ದರು ಎಂದು ಹೇಳಲಾಗುವುದಿಲ್ಲ. ಯಾವ ಮುಖ ಬೆಲೆಯ ನೋಟುಗಳನ್ನು ಜಪ್ತುಪಡಿಸಿಕೊಂಡಿರುತ್ತೀರಿ ಎಂದು ಹಣ ಹೆಚ್ಚು ಇರುವುದರಿಂದ ಹೇಳಲಾಗುವುದಿಲ್ಲ. ಚಾಸಾ-14 ರವರು ಪಿ.ಎಸ್.ಐ. ಇದ್ದಾಗ ಆರೊಪಿ 1 ಮತ್ತು 2 ರವರ ಮೇಲೆ ಸುಮಾರು 3-4 ಕೃಷಿ ಜಮೀನಿನಲ್ಲಿ ಪ್ರಕರಣಗಳಿವೆ ಎಂದರೆ ಸರಿ. ಆರೋಪಿತರು ಸಾಕಷ್ಟು ಬಾರಿ ಚಾಸಾ-14 ರವರ ಬಳಿ ಹೋಗಿ ಜಮಿನಿಗೆ ಹಾಗೂ ನಮಗೆ ಸಂಬಂಧ ಇಲ್ಲ ಎಂದು ಹೇಳಿರುತ್ತಾರೆ ಎಂದರೆ ಸರಿಯಲ್ಲ. ಆ ಕಾರಣದಿಂದ ಚಾಸಾ-14 ರವರು ಆರೋಪಿತರನ್ನು ಸದರಿ ಪ್ರಕರನದಲ್ಲಿ ಸೇರಿಸಿ, ದಾಖಲಿಸಲು ಹೇಳಿರುತ್ತಾರೆ ಎಂದರೆ ಸರಿಯಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲಾ ವಿಷಯಗಳು ಸುಳ್ಳು ಎಂದರೆ ಸರಿಯಲ್ಲ. ಆರೋಪಿತರಿಗೂ ಹಾಗೂ ಮುಮಾ-1 ರಿಂದ 4 ಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ಘಟನಾ ಜಾಗಕ್ಕೆ ಹೋಗಿಲ್ಲ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

Sd/-

ಓ ಹೇ ಕೇ ಸರಿ ಇದೆ.

ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,ಸಂಚಾರಿ

ನ್ಯಾಯಪೀಠ ರಟ್ಟೀಹಳ್ಳಿ.